ಪಡೆದಿದ್ದಾರೆ ಅಂಥ ಪೋಲೀಸ್ ಅಧಿಕಾರಿಯ ನೇತೃತ್ವದಲ್ಲೇ ಪೋಲೀಸ್ ಪಹರೆಯನ್ನು ಇಡಲಾಗಿದೆ. ಅವರು ಈಗಾಗಲೇ ಸುಮಾರು ೧ ಕೋಟಿ ರೂ.ಗಳಿಗೂ ಹೆಚ್ಚು ಬೆಲೆಬಾಳುವ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಹೆಗ್ಗಡದೇವನಕೋಟೆ, ಚಾಮರಾಜನಗರ, ಮುಖಾಂತರ ಹೋಗತಕ್ಕ ವಸ್ತುಗಳ ಬಗ್ಗೆಯೂ ಗಮನಹರಿಸಬೇಕೆಂದು ಹೇಳಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಪೋಲೀಸ್ ಇಲಾಖೆಯಲ್ಲಿರತಕ್ಕ ಕೆಲವರಿಗೆ ಸರ್ಕಾರೀ ಮನೆಗಳನ್ನು ಒದಗಿಸಿಕೊಡುತ್ತೀರಿ. ಕೆಲವರಿಗೆ ಕೊಡುವುದಿಲ್ಲ. ಕೆಲವು ಐ.ಪಿ.ಎಸ್. ಅಧಿಕಾರಿಗಳಿಗೆ ಮನೆ ಬಾಡಿಗೆಯನ್ನು ಕೊಡುತ್ತೀರಿ, ನಾನ್ ಐ.ಪಿ.ಎಸ್.ಗೆ ಮನೆ ಬಾಡಿಗೆಯನ್ನು ಕೊಡುವುದಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸಬೇಕು.

ಶ್ರೀ ಬಿ. ರಾಚಯ್ಯ —ನಾವು ವೇತನ ಆಯೋಗವನ್ನು ನೇಮಕ ಮಾಡಿರುವುದರಿಂದ ಈ ವಿಚಾರ ಅದರ ಮುಂದೆ ಬರುತ್ತದೆ. ಮನೆ ಬಾಡಿಗೆಯನ್ನು ಕೊಡಬೇಕೋ, ಬಿಡಬೇಕೋ ಎಂಬುದನ್ನು ಅವರು ತಿಳಿಸುತ್ತಾರೆ.

ಅಧ್ಯಕ್ಷರು.—ಇದುವರೆಗೆ ಸಾಕಷ್ಟು ಸಮಯವನ್ನು ಈ ಚರ್ಚೆಗೋಸ್ಕರ ವಿನಿಯೋಗಿಸಿದ್ದೇವೆ. ಇಲ್ಲಿಗೆ ಈ ಬೇಡಿಕೆಯ ಮೇಲಿನ ಚರ್ಚೆ ಮತ್ತು ಉತ್ತರ ಮುಕ್ತಾಯವಾಯಿತು. ಈಗ ಬೇಡಿಕೆಯನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ :

> ತಾ॥ ೩೧-೩-೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೧,೫೯,೬೯,೦೦೦ ರೂ.ಗಳಿಗಿಂತ ಮಿಗಾದ ಮೊತ್ತವನ್ನು ಮಂಜೂರು ಮಾಡಬೇಕು.
>
> ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೆ, ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಪರವಾಗಿ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಐ.ಬಿ. ಶಂಕರ್.—ನಾನು ಇದನ್ನು ಅನುಮೋದಿಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

ಅಭಿಯಾಚನೆ ಕ್ರಮಾಂಕ ೩೪-(ಸಣ್ಣ ನೀರಾವರಿ)—೩೫—ನೀರಾವರಿ, ಜಲಸಂಚಾರ ಒಳಚರರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು, ೪೪—ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ), ೪೫—(ಕಟ್ಟಡಗಳು), ೪೬ ರಸ್ತೆಗಳು ಮತ್ತು ಸೇತುವೆಗಳು

ಅಭಿಯಾಚನೆ ಕ್ರಮಾಂಕ—೩೪ (ಸಣ್ಣ ನೀರಾವರಿ)

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ,

> "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೫೫,೩೩,೯೦,೦೦೦ ರೂ.ಗಳಿಗಿಂತ ಮಿಗಾದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೪,೮೦,೬೫,೦೦೦ ರೂಗಳಿಗಿಂತ ಮಿಗಾದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.